**ದಿನಾಂಕ : *14-02-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು : *2* ನೇ ಎದರುದಾರರ ಪರ ಶ್ರೀ ಎಮ್ ಎಸ್ ಹೆಚ್ ವಕೀಲರಿಂದ**

ನಾನು ಅಪಘಾತದ ದಿನ ಅಮೀನಗಡದಿಂದ ಕಮತಗಿ ಗೆ ಹೊರಟಿದ್ದೆ. ನಾನು ಅಪಘಾತವಾದ ದಿನ ನಾನು ಮೋಟರ ಸೈಕಲ್ಲ ಮೇಲೆ ಹೊರಟಿದ್ದೆ . ನನಗೆ ಡಿ ಎಲ್ ಇರುತ್ತದೆ. ನನಗೆ ಡಿ ಎಲ್ ಇರದೇ ಇರುವುದರಿಂದ ನನ್ನನ್ನು ಆರೋಪಿಯನ್ನಾಗಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ಡಿ ಎಲ್ ನನ್ನು ಮಾ.ನ್ಯಾ. ಕ್ಕೆ ಹಾಜರು ಪಡಿಸುತ್ತೇನೆ. ನಾನು ಅಮೀನಗಡದಿಂದ ಎಡಗಡೆ ಭಾಗದಲ್ಲಿ ನನ್ನಮೋಟರ ಸೈಕಲ್ಲ ಮೇಲೆ ಹೊರಟಿದ್ದಾಗ ಎದುರುಗಡೆಯಿಂದ ಕಾರ ಬರುತ್ತಿದ್ದು ಅದರ ಟಾಯರ ಬ್ಲಸ್ಟ ಆಗಿದ್ದರಿಂದ ನನಗೆ ಡಿಕ್ಕಿ ಪಡಿಸಿ ಮುಂದೆ ಹೋಗಿರುತ್ತದೆ. ನಾನು ದೂರು ನೀಡಿರುತ್ತೇನೆ. ನಾನು ದೂರನ್ನು ಹಾಜರು ಪಡಿಸಿರುತ್ತೇನೆ. ಅಂತಿಮ ವರದಿಯಲ್ಲಿ ಪೋಲಿಸರು ನನ್ನ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ.ಅಪಘಾತವಾದಾಗ ನನ್ನ ಕಾಲು ಕಟ್ಟಾಗಿರುತ್ತದೆ. ನನ್ನನ್ನು ಆಶೀರ್ವಾದ ಆಸ್ಪತ್ರೆಗೆ ಎಡ್ಮಿಟ್ ಮಾಡಿದ್ದರು. ನನ್ನ ಬಲ ಕಾಲಿಗೆ ಆಪರೇಷನ ಮಾಡಿರುತ್ತಾರೆ. ನಾನು ಹಾಜರು ಪಡಿಸಿರುವ ವೈದ್ಯಕೀಯ ಬಿಲ್ಲುಗಳು ಖೊಟ್ಟಿಯಾಗಿರುತ್ತವೆ ಎಂದರೆ ಸರಿಯಲ್ಲ. ನಾನು *2* ಲಕ್ಷ ರೂ.ಗಳನ್ನು ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೂಲಿಮಾಡಿ *20* ಸಾವಿರು ರೂ.ಗಳನ್ನು ದುಡಿಯುತ್ತಿದ್ದೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನನಗೆ ಮೊದಲಿನ ಹಾಗೆ ಕೆಲಸ ಮಾಡಲು ಆಗುವುದಿಲ್ಲ. ನಾನೇ ಆರೋಪಿ ಆಗಿರುವುದರಿಂದ ಪರಿಹಾರವನ್ನು ಪಡೆಯಲು ಭಾದ್ಯಸ್ತನಲ್ಲ ಎಂದರೆ ಸರಿಯಲ್ಲ. ನನಗೆ *30* ವರ್ಷ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಪರಿಹಾರವನ್ನು ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

HANAMANTARAO R KULKARNI

Digitally signed by HANAMANTARAO R KULKARNI
Date: 2025.02.15 17:39:47 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.